# "ತೆಂಗಿನ ಮರದ ಸ್ನೇಹಿತರು" ತರಬೇತಿ ಕಾರ್ಯಕ್ರಮ

**ಭಾ. ಕೃ. ಅ. ಪ. -ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ- ಸಂಸ್ಥೆಯು ದಿನಾಂಕ 28 ಜನವರಿ 2019 ರಿಂದ 21 ಫೆಬ್ರುವರಿ 2019 ರವರೆಗೆ ಕೃಷಿಕರಿಗಾಗಿ ಹಾಗು ನಿರುದ್ಯೋಗಿ ಯುವಕರಿಗೆ "ತೆಂಗಿನ ಮರದ ಸ್ನೇಹಿತರು" ಎಂಬ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದೆ. ಈ ಕಾರ್ಯಕ್ರಮವು ಕೃಷಿ ಕೌಶಲ್ಯ ಕೌನ್ಸಿಲ್ ನಿಂದ ಪ್ರಾಯೋಜಿತವಾಗಿದೆ ಹಾಗು ಶೇಕಡಾ 30% ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಈ ತರಬೇತಿಯಲ್ಲಿ-**

**1. ಯಂತ್ರದ ಸಹಾಯದಿಂದ ತೆಂಗಿನ ಮರ ಹತ್ತುವುದು, 2. ಎಳೆಯ/ಬಲಿತ ಕಾಯಿಗಳನ್ನು ಗುರುತಿಸುವುದು ಹಾಗು ಕೊಯ್ಲು ಮಾಡುವುದು, 3. ಸಮಗ್ರ ಪೌಷ್ಟಿಕ ನಿರ್ವಹಣೆ, 4. ಸಂಯೋಜಿತ ಕೀಟ ಮತ್ತು ರೋಗ ನಿರ್ವಹಣೆ, 5. ವಿಷಯಾಧಾರಿತ ಸಂಪೂರ್ಣ ಮಾಹಿತಿಯನ್ನು ತಿಳಿಸಿಕೊಡಲಾಗುವುದು. ಈ ತರಬೇತಿಯಲ್ಲಿ ಭಾಗವಹಿಸಲು ಇಚ್ಚಿಸುವ ಅಭ್ಯರ್ಥಿಗಳು ಕನಿಷ್ಠ 5 ನೇ ತರಗತಿ ತೇರ್ಗಡೆಯಾಗಿರಬೇಕು ಹಾಗು 18 ರಿಂದ 40 ವರ್ಷದ ವಯೋಮಿತಿಯೊಳಗಿರಬೇಕು. ಅಭ್ಯರ್ಥಿಗಳು ಉತ್ತಮ ದೈಹಿಕ ಆರೋಗ್ಯವನ್ನು ಹೊಂದಿರಬೇಕು. ತೆಂಗಿನ ಕೃಷಿ ಹಿನ್ನೆಲೆ ಹಾಗು ತೆಂಗಿನ ಮರ ಹತ್ತುವ ನೈಪುಣ್ಯ ಇರುವ ಅಭ್ಯರ್ಥಿಗಳಿಗೆ ಆದ್ಯತೆ ಕೊಡಲಾಗುವುದು ಆದರೆ ಕಡ್ಡಾಯವಾಗಿರುವುದಿಲ್ಲ. ಈ ತರಬೇತಿ ಯಲ್ಲಿ ಪಾಲುಗೊಳ್ಳಲು ಇಚ್ಚಿಸುವ ಅಭ್ಯರ್ಥಿಗಳು ತಮ್ಮ ಹೆಸರು, ವಯಸ್ಸು, ಶೈಕ್ಷಣಿಕ ಅರ್ಹತೆ, ಆಧಾರ್ ಸಂಖ್ಯೆ, ಲಿಂಗ ಮತ್ತು ಮೊಬೈಲ್ ಸಂಖ್ಯೆ ನಮೂದಿಸಿರುವ ಅರ್ಜಿ ಪತ್ರವನ್ನು ದಿನಾಂಕ 25.01.2019 ರೊಳಗೆ ಈ ಸಂಸ್ಥೆಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು, ಕಚೇರಿ ಮುಖ್ಯಸ್ಥರು, ಭಾ. ಕೃ. ಅ. ಪ. -ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲಗಳ ಬ್ಯೂರೋ , ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560024, ದೂರವಾಣಿ ಸಂಖ್ಯೆ-080-23511998, ಮೊಬೈಲ್ ಸಂಖ್ಯೆ -09482138812 ಇವರನ್ನು ಸಂಪರ್ಕಿಸಲು ಕೋರಲಾಗಿದೆ.**